All India Radio: Bangalore
National Bulletins In Kannada
16.06.2025 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಭಾರತ- ಸೈಪ್ರಸ್ ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸಲು ಸಮಗ್ರ, ಸಂಘಟಿತ ಮತ್ತು ನಿರಂತರ ವಿಧಾನದ ಅಗತ್ಯವನ್ನು ಪ್ರಸ್ತುತಪಡಿಸಿವೆ
- ಭಾರತೀಯ ಸಗಟು ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರ ಮೇ ನಲ್ಲಿ ೧೪ ತಿಂಗಳ ಕನಿಷ್ಠ ಮಟ್ಟವಾದ ಶೇಕಡ ೦.೩೯ ಕ್ಕೆ ಇಳಿಕೆ
- ಭಾರತವು ವಿಪತ್ತು ನಿರ್ವಹಣಾ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗುವತ್ತ ಸಾಗುತ್ತಿದೆ- ಕೇಂದ್ರ ಸಚಿವ ಅಮಿತ್ ಶಾ
- ಮಹಿಳಾ ಏಕದಿನ ವಿಶ್ವಕಪ್-೨೦೨೫ ರ ವೇಳಾ ಪಟ್ಟಿ ಪ್ರಕಟಿಸಿದ ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್

<><*<><>*><>

ಸೈಪ್ರಸ್ ಪ್ರವಾಸದ ಎರಡನೇ ದಿನವಾದು ಇಂದು ಪ್ರಧಾನಿ ನರೇಂದ್ರ ಮೋದಿ, ಅಧ್ಯಕ್ಷ ನಿಕೋಸ್ ಕ್ರಿಸ್ಟೋಡೌಲಿಡೆಸ್ ಅವರೊಂದಿಗೆ ಮಾಧ್ಯಮ ಗೋಷ್ಠಿ ನಡೆಸಿದರು. ಪ್ರಧಾನಿ ನರೇಂದ್ರ ಮೋದಿ ಮಾತನಾಡಿ, ಭಾರತ ಮತ್ತು ಸೈಪ್ರಸ್ ನಡುವಿನ ಸಂಬಂಧವು ಸಂವಿಧಾನಬದ್ಧ ನೈತಿಕ ಮೌಲ್ಯಗಳು ಮತ್ತು ಕಾನೂನು ಪ್ರಭುತ್ವದ ಮೇಲೆ ಆಧಾರಿತವಾಗಿದ್ದು, ಇದು ಕಾಲಪರಿಸ್ಥಿತಿಗಳಿಂದಾಗಲಿ ಅಥವಾ ಭೌಗೋಳಿಕ ಗಡಿಗಳಿಂದಾಗಲಿ ನಿರ್ಬಂಧಿತವಾಗಿಲ್ಲ ಎಂದರು. ನಿನ್ನೆ ನಡೆದ ಪ್ರತಿನಿಧಿ ಮಟ್ಟದ ಚರ್ಚೆಗಳ ನಂತರ, ಇಂದು ಹೊರಡಿಸಲಾದ ಜಂಟಿ ಘೋಷಣೆಯಲ್ಲಿ, ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸಲು ಸಮಗ್ರ, ಸಂಘಟಿತ ಮತ್ತು ನಿರಂತರ ವಿಧಾನದ ಅಗತ್ಯವನ್ನು ಉಭಯ ನಾಯಕರು ಒತ್ತಿ ಹೇಳಿದರು. ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ಸೈಪ್ರಸ್ ಭಾರತಕ್ಕೆ ಒಗ್ಗಟ್ಟು ಮತ್ತು ಅಚಲ ಬೆಂಬಲವನ್ನು ವ್ಯಕ್ತಪಡಿಸಿತು. ಭಯೋತ್ಪಾದನೆಯನ್ನು ಎದುರಿಸಲು ಬಹುಪಕ್ಷೀಯ ಪ್ರಯತ್ನಗಳನ್ನು ಬಲಪಡಿಸುವ ಬದ್ಧತೆಯನ್ನು ಇಬ್ಬರೂ ನಾಯಕರು ಪುನರುಚ್ಚರಿಸಿದರು.

ಧ್ವನಿ: ಪ್ರಧಾನಿ ನರೇಂದ್ರ ಮೋದಿ ( ೧೯ ಸೆಕೆಂಡ್ಸ್)

ಇದೇ ಸಂದರ್ಭದಲ್ಲಿ ಪ್ರಧಾನಿ, ಉಭಯ ದೇಶಗಳ ನಡುವೆ ಮೊಬಿಲಿಟಿ ಒಪ್ಪಂದವನ್ನು ಶೀಘ್ರವೇ ಅಂತಿಮಗೊಳಿಸಲು ಸಮ್ಮತಿಸಿರುವುದಾಗಿ ಘೋಷಿಸಿದರು. ಯುರೋಪಿಯನ್ ಒಕ್ಕೂಟದ ಮುಂದಿನ ಅವಧಿ ಅಧ್ಯಕ್ಷತೆ ವಹಿಸಲಿರುವ ಸೈಪ್ರಸ್‌ಗೆ ಶುಭಾಶಯ ಕೋರಿದರು. ಭಾರತವನ್ನು ವಿಶ್ವಸಂಸ್ಥೆ ರಕ್ಷಣಾ ಮಂಡಳಿಯ ಸ್ಥಾಯಿ ಸದಸ್ಯರನ್ನಾಗಿ ಮಾಡಬೇಕೆಂಬ ಧೋರಣೆಗೆ ಸೈಪ್ರಸ್ ನೀಡುತ್ತಿರುವ ನಿರಂತರ ಬೆಂಬಲಕ್ಕೂ ಪ್ರಧಾನಿ ಕೃತಜ್ಞತೆ ಸಲ್ಲಿಸಿದರು. ಪಶ್ಚಿಮ ಏಷ್ಯಾ ಮತ್ತು ಯೂರೋಪಿನಲ್ಲಿ ನಡೆಯುತ್ತಿರುವ ಸಂಘರ್ಷಗಳು ಜಾಗತಿಕವಾಗಿ ಪ್ರಭಾವ ಬೀರುತ್ತಿವೆ. "ಇದು ಯುದ್ಧದ ಯುಗವಲ್ಲ"

ಎಂದು ಪುನರಾವರ್ತಿಸಿದ ಅವರು, ಶಾಂತಿ, ಸಂವಾದ ಮತ್ತು ಸ್ಥಿರತೆಯ ಅಗತ್ಯವಿದೆ. ಈ ಪ್ರಕ್ರಿಯೆಯಲ್ಲಿ ಭಾರತ-ಮಧ್ಯಪ್ರಾಚ್ಯ-ಯೂರೋಪ್ ಆರ್ಥಿಕ ಕಾರಿಡಾರ್ ಸಹಕಾರಿಯಾಗಬಹುದೆಂದು ಪ್ರಧಾನಿ ಅಭಿಪ್ರಾಯಪಟ್ಟರು. ಸಂವಾದದ ವೇಳೆ, ರಕ್ಷಣಾ ಸಹಕಾರ, ತಂತ್ರಜ್ಞಾನ, ಆರೋಗ್ಯ, ನವೀಕರಿಸಬಹುದಾದ ಇಂಧನ, ಹವಾಮಾನ ನ್ಯಾಯ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಸಹಕಾರವರ್ಧನೆ ಬಗ್ಗೆ ಚರ್ಚೆಗಳು ನಡೆದವು.

<><*<><>*><>

ಸೈಪ್ರಸ್‌ಗೆ ಐತಿಹಾಸಿಕ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸೈಪ್ರಸ್ ಗಣರಾಜ್ಯದ ಅತ್ಯುನ್ನತ ನಾಗರಿಕ ಗೌರವವಾದ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ಮಕರಿಯೋಸ್ III' ಅನ್ನು ಪ್ರದಾನ ಮಾಡಲಾಯಿತು. ಈ ಮನ್ನಣೆಯು ಪ್ರಧಾನ ಮಂತ್ರಿಯವರು ಪಡೆದ ಅಂತರರಾಷ್ಟ್ರೀಯ ಪುರಸ್ಕಾರಗಳ ಪಟ್ಟಿಗೆ ಸೇರ್ಪಡೆಯಾಗಿದೆ. ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ, ಈ ಗೌರವವು ತಮಗೆ ಮಾತ್ರವಲ್ಲ, ಭಾರತದ ೧೪೦ ಕೋಟಿ ಜನರಿಗೆ ಸಲ್ಲುತ್ತದೆ ಎಂದು ಹೇಳಿದ್ದಾರೆ. ಈ ಗೌರವವು ಪ್ರಧಾನಿ ಮೋದಿಯವರ ಐತಿಹಾಸಿಕ ಸೈಪ್ರಸ್ ಭೇಟಿಯಲ್ಲಿ ಮಹತ್ವದ ಕ್ಷಣವಾಗಿದೆ, ಎರಡು ದಶಕದಲ್ಲಿ ಭಾರತೀಯ ಪ್ರಧಾನಿಯೊಬ್ಬರು ಸೈಪ್ರಸ್‌ಗೆ ನೀಡಿದ ಮೊದಲ ಭೇಟಿ ಇದಾಗಿದೆ.

<><*<><>*><>

ಭಾರತದ ಸಗಟು ಬೆಲೆ ಸೂಚ್ಯಂಕ-ಡಬ್ಲ್ಯುಪಿಐ ಆಧಾರಿತ ಹಣದುಬ್ಬರವು ಏಪ್ರಿಲ್‌ನಲ್ಲಿದ್ದ ಶೇಕಡ ೦.೮೫ ಪ್ರತಿಶತದಿಂದ ೧೪ ತಿಂಗಳಲ್ಲೇ ಕನಿಷ್ಠ ಮಟ್ಟವಾದ ಶೇಕಡ ೦.೩೯ ಕ್ಕೆ ಮೇ ತಿಂಗಳಿನಲ್ಲಿ ಇಳಿಕೆಯಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.  ಆಹಾರ ಹಣದುಬ್ಬರವು, ಶೇಕಡ ೨.೫೫ ರಿಂದ ಶೇಕಡ ೧.೭೨ ಕ್ಕೆ ಇಳಿದಿದೆ, ಆದರೆ ಪ್ರಾಥಮಿಕ ವಸ್ತುಗಳು ಶೇಕಡ ೨.೦೨ ರಷ್ಟು ಸಂಕೋಚನ ಕಂಡಿದೆ. ಇಂಧನ ಮತ್ತು ವಿದ್ಯುತ್ ವಿಭಾಗದ ಹಣದುಬ್ಬರವು, ಶೇಕಡ ೨.೨೭ ಕ್ಕೆ ಇಳಿಕೆಯನ್ನು ದಾಖಲಿಸಿದ್ದು, ತಯಾರಿಸಿದ ಉತ್ಪನ್ನಗಳ ಹಣದುಬ್ಬರವು, ಶೇಕಡ ೨.೦೪ಕ್ಕೆ ಇಳಿಕೆಯಾಗಿದೆ. ಆಹಾರ ಉತ್ಪನ್ನಗಳು, ರಾಸಾಯನಿಕಗಳು ಮತ್ತು ಸಾರಿಗೆ ಉಪಕರಣಗಳ ಬೆಲೆ ಏರಿಕೆಯಿಂದಾಗಿ ಹಣದುಬ್ಬರ ದರವು ಸಕಾರಾತ್ಮಕವಾಗಿದೆ ಎಂದು ಸಚಿವಾಲಯ ಹೇಳಿದೆ.

<><*<><>*><>

ಭಾರತದ ಸಗಟು ಬೆಲೆ ಸೂಚ್ಯಂಕ-ಡಬ್ಲ್ಯುಪಿಐ ಆಧಾರಿತ ಹಣದುಬ್ಬರವು ಏಪ್ರಿಲ್‌ನಲ್ಲಿದ್ದ ಶೇಕಡ ೦.೮೫ ಪ್ರತಿಶತದಿಂದ ೧೪ ತಿಂಗಳಲ್ಲೇ ಕನಿಷ್ಠ ಮಟ್ಟವಾದ ಶೇಕಡ ೦.೩೯ ಕ್ಕೆ ಮೇ ತಿಂಗಳಿನಲ್ಲಿ ಇಳಿಕೆಯಾಗಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ. ಆಹಾರ ಹಣದುಬ್ಬರವು, ಶೇಕಡ ೨.೫೫ ರಿಂದ ಶೇಕಡ ೧.೭೨ ಕ್ಕೆ ಇಳಿದಿದೆ, ಆದರೆ ಪ್ರಾಥಮಿಕ ವಸ್ತುಗಳು ಶೇಕಡ ೨.೦೨ ರಷ್ಟು ಸಂಕೋಚನ ಕಂಡಿದೆ. ಇಂಧನ ಮತ್ತು ವಿದ್ಯುತ್ ವಿಭಾಗದ ಹಣದುಬ್ಬರವು, ಶೇಕಡ ೨.೨೭ ಕ್ಕೆ ಇಳಿಕೆಯನ್ನು ದಾಖಲಿಸಿದ್ದು, ತಯಾರಿಸಿದ ಉತ್ಪನ್ನಗಳ ಹಣದುಬ್ಬರವು, ಶೇಕಡ ೨.೦೪ಕ್ಕೆ ಇಳಿಕೆಯಾಗಿದೆ. ಆಹಾರ ಉತ್ಪನ್ನಗಳು, ರಾಸಾಯನಿಕಗಳು ಮತ್ತು ಸಾರಿಗೆ ಉಪಕರಣಗಳ ಬೆಲೆ ಏರಿಕೆಯಿಂದಾಗಿ ಹಣದುಬ್ಬರ ದರವು ಸಕಾರಾತ್ಮಕವಾಗಿದೆ ಎಂದು ಸಚಿವಾಲಯ ಹೇಳಿದೆ.

<><*<><>*><>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರು ಇಂದು ಯುನೈಟೆಡ್ ಅರಬ್ ಅಮಿರೇಟ್ಸ್ ವಿದೇಶಾಂಗ ಸಚಿವ ಶೇಖ್ ಅಬ್ದುಲ್ಲಾ ಬಿನ್ ಜಾಯೆದ್ ಅಲ್ ನಹ್ಯಾನ್ ಅವರೊಂದಿಗೆ ಪಶ್ಚಿಮ ಏಷ್ಯಾದ ಪ್ರಸ್ತುತ ಪರಿಸ್ಥಿತಿ ಮತ್ತು ರಾಜತಾಂತ್ರಿಕತೆಯ ಪಾತ್ರದ ಕುರಿತು ದೂರವಾಣಿ ಸಂಭಾಷಣೆ ನಡೆಸಿದರು. ಡಾ. ಜೈಶಂಕರ್ ಅವರು, ಅರ್ಮೇನಿಯಾದ ವಿದೇಶಾಂಗ ಸಚಿವ ಅರರತ್ ಮಿರ್ಜೋಯನ್ ಅವರೊಂದಿಗೆ ಮಾತುಕತೆ ನಡೆಸಿ, ಈ ಪ್ರದೇಶದಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಮತ್ತು ಭಾರತ ಮತ್ತು ಅರ್ಮೇನಿಯಾ ನಡುವಿನ ನಿಕಟ ಸಹಕಾರದ ಕುರಿತು ಚರ್ಚಿಸಿದರು.

<><*<><>*><>

ಕರ್ನಾಟಕ ರಾಜ್ಯದಲ್ಲಿ ಮತ್ತೆ ಜಾತಿ ಜನಗಣತಿ ನಡೆಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಬಿಜೆಪಿ ಇಂದು ಟೀಕಿಸಿದೆ. ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಹಿರಿಯ ಬಿಜೆಪಿ ನಾಯಕ ಮತ್ತು ಕೇಂದ್ರ ಸಚಿವ ಭೂಪೇಂದರ್ ಯಾದವ್, ಕಾಂಗ್ರೆಸ್‌ಗೆ ಹಿಂದುಳಿದ ವರ್ಗಗಳು ಕೇವಲ ಮತಬ್ಯಾಂಕ್ ಎಂದು ಆರೋಪಿಸಿದ್ದಾರೆ. ಜಾತಿ ಜನಗಣತಿಗೆ ಈ ಹಿಂದೆ ೧೬೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ಸರ್ಕಾರಿ ನಿಧಿಯ ದುರುಪಯೋಗವಾಗಿದೆ, ಇದಕ್ಕೆ ಹೊಣೆ ಯಾರು ಎಂದು ಅವರು ಕರ್ನಾಟಕ ಸರ್ಕಾರವನ್ನು ಪ್ರಶ್ನಿಸಿದ್ದಾರೆ. ಕರ್ನಾಟಕದಲ್ಲಿ ಮರು ಸಮೀಕ್ಷೆಯ ನಿರ್ಧಾರವು, ಕೇವಲ ರಾಜಕೀಯ ಮರೆಮಾಚುವಿಕೆಯಾಗಿದ್ದು, ಇದನ್ನು ಸಮಾಜದ ಕೆಲವು ವರ್ಗಗಳನ್ನು ದಾರಿ ತಪ್ಪಿಸಲು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ ಎಂದು ಅವರು ಆಪಾದಿಸಿದ್ದಾರೆ. ಕಾಂಗ್ರೆಸ್ ಪಕ್ಷವು ಪ್ರಾಮಾಣಿಕವಾಗಿದ್ದರೆ ಕಾಕಾ ಕಾಲೇಲ್ಕರ್ ಆಯೋಗದ ನಂತರ ಯಾವುದೇ ಆಯೋಗವನ್ನು ಏಕೆ ರಚಿಸಲಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

<><*<><>*><>

ಭಾರತವು, ವಿಪತ್ತು ನಿರ್ವಹಣಾ ಕ್ಷೇತ್ರದಲ್ಲಿ ಜಾಗತಿಕ ನಾಯಕನಾಗುವತ್ತ ಸಾಗುತ್ತಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ನವದೆಹಲಿಯಲ್ಲಿಂದು ನಡೆದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪರಿಹಾರ ಆಯುಕ್ತರು ಮತ್ತು ವಿಪತ್ತು ನಿರ್ವಹಣಾ ಪಡೆಗಳ ವಾರ್ಷಿಕ ಸಮ್ಮೇಳನವನ್ನುದ್ದೇಶಿಸಿ ಅವರು ಮಾತನಾಡಿದರು. ಭಾರತವು, ಮುಂಚಿತ ಎಚ್ಚರಿಕೆ ವ್ಯವಸ್ಥೆಗಳ ಅಭಿವೃದ್ಧಿಯಲ್ಲಿ ಹೆಚ್ಚಿನ ಸಾಧನೆ ಮಾಡಿದೆ. ನಿಖರವಾದ ಮುನ್ಸೂಚನೆ ಮತ್ತು ಮುಂಚಿನ ಎಚ್ಚರಿಕೆಗಳನ್ನು ನೀಡುವ ಮೂಲಕ, ಸಮಾಜವನ್ನು ಜಾಗೃತಗೊಳಿಸಲಾಗಿದೆ ಮತ್ತು ಪರಿಹಾರ ಹಾಗೂ ರಕ್ಷಣಾ ಕಾರ್ಯಾಚರಣೆಗಳಲ್ಲಿ ಯಶಸ್ವಿಯಾಗಿ ತೊಡಗಿಸಿಕೊಂಡಿದೆ ಎಂದು ಅವರು ಹೇಳಿದರು.

<><*<><>*><>

ನೌಕರರ ಭವಿಷ್ಯ ನಿಧಿ ಸಂಸ್ಥೆ-ಇಪಿಎಫ್‌ಒ ಸದಸ್ಯರು ಅನಧಿಕೃತ ಏಜೆಂಟ್‌ಗಳನ್ನು ಸಂಪರ್ಕಿಸುವುದನ್ನು ನಿಲ್ಲಿಸಿ, ಉಚಿತ ಹಾಗೂ ಸುರಕ್ಷಿತ ಆನ್‌ಲೈನ್ ಸೇವೆಗಳಿಗಾಗಿ ಅಧಿಕೃತ ಇಪಿಎಫ್‌ಒ ಪೋರ್ಟಲ್‌ಗಳನ್ನು ಬಳಕೆ ಮಾಡಬೇಕೆಂದು ಇಪಿಎಫ್‌ಒ ಒತ್ತಾಯಿಸಿದೆ. ಇಪಿಎಫ್‌ಒ ತನ್ನ ಸೇವೆಗಳನ್ನು ವೇಗವಾಗಿ, ಪಾರದರ್ಶಕವಾಗಿ, ಎಲ್ಲಾ ಪಾಲುದಾರರಿಗೆ ಬಳಕೆದಾರ ಸ್ನೇಹಿಯಾಗಿ ಮಾಡಲು ವಿನ್ಯಾಸಗೊಳಿಸಲಾದ ಹಲವು ಸುಧಾರಣೆಗಳನ್ನು ಕೈಗೊಂಡಿದ್ದು, ದೃಢವಾದ ಕುಂದುಕೊರತೆ ಮೇಲ್ವಿಚಾರಣೆ ಮತ್ತು

ಪರಿಹಾರ ವ್ಯವಸ್ಥೆಯನ್ನು ಹೊಂದಿದೆ ಎಂದು ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ತಿಳಿಸಿದೆ. ೨೦೨೪-೨೫ರಲ್ಲಿ ಇಪಿಎಫ್ ಕುಂದುಕೊರತೆ ನಿರ್ವಹಣಾ ವ್ಯವಸ್ಥೆಯಲ್ಲಿ ಒಟ್ಟು ೧೬ ಲಕ್ಷಕ್ಕೂ ಹೆಚ್ಚು ಕುಂದುಕೊರತೆಗಳು ಹಾಗೂ ಕೇಂದ್ರೀಕೃತ ಸಾರ್ವಜನಿಕ ಕುಂದುಕೊರತೆ ಪರಿಹಾರ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯಲ್ಲಿ ಒಂದು ಲಕ್ಷ ೭೪ ಸಾವಿರಕ್ಕೂ ಹೆಚ್ಚು ಕುಂದುಕೊರತೆಗಳನ್ನು ಸ್ವೀಕರಿಸಲಾಗಿದೆ. ಇವುಗಳಲ್ಲಿ ಶೇಕಡ ೯೮ ರಷ್ಟು ಕುಂದುಕೊರತೆಗಳನ್ನು ನಿಗದಿತ ಸಮಯದೊಳಗೆ ಪರಿಹರಿಸಲಾಗಿದೆ ಎಂದು ಸಚಿವಾಲಯ ಮಾಹಿತಿ ನೀಡಿದೆ.

<><*<><>*><>

ಮಹಿಳಾ ಏಕದಿನ ವಿಶ್ವಕಪ್ -೨೦೨೫ ರ ವೇಳಾ ಪಟ್ಟಿಯನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್- ಐಸಿಸಿ ಪ್ರಕಟಿಸಿದೆ. ಭಾರತ ಆತಿಥ್ಯ ವಹಿಸಲಿರುವ ಈ ಆವೃತ್ತಿಯ ಪಂದ್ಯಗಳು ಸೆಪ್ಟಂಬರ್ ೩೦ ರಂದು ಆರಂಭವಾಗಲಿವೆ. ಪಂದ್ಯಾವಳಿಯಲ್ಲಿ ಭಾರತ ಸೇರಿದಂತೆ ಒಟ್ಟು ೮ ದೇಶಗಳು ಸೆಣಸಾಡಲಿವೆ. ಆತಿಥೇಯ ಭಾರತ ತಂಡವು ಸೆಪ್ಟೆಂಬರ್ ೩೦ ರಂದು ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶ್ರೀಲಂಕಾ ವಿರುದ್ಧ ತನ್ನ ವಿಶ್ವಕಪ್ ಅಭಿಯಾನವನ್ನು ಆರಂಭಿಸಲಿದೆ. ವೇಳಾಪಟ್ಟಿಯಲ್ಲಿ, ತನ್ನ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಭಾರತದ ಬಹು ನಿರೀಕ್ಷಿತ ಪಂದ್ಯವು ಅಕ್ಟೋಬರ್ ೫ ರಂದು ತಟಸ್ಥ ಸ್ಥಳವಾದ ಕೊಲಂಬೊದ ಆರ್ ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿದೆ. ಬಿಸಿಸಿಐ ಮತ್ತು ಪಿಸಿಬಿ ನಡುವಿನ ಹೈಬ್ರಿಡ್ ಆಟಗಳ ಒಪ್ಪಂದದ ಪ್ರಕಾರ ಪಾಕಿಸ್ತಾನವು ಕೊಲಂಬೊದಲ್ಲಿ ತನ್ನ ಎಲ್ಲಾ ಪಂದ್ಯಗಳನ್ನು ಆಡಲಿದೆ.

<><*<><>*><>

ಇರಾನ್‌ನ ಟೆಹ್ರಾನ್‌ನಲ್ಲಿ ನಡೆದ ನಿಖರವಾದ ವೈಮಾನಿಕ ದಾಳಿಯಲ್ಲಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಗುಪ್ತಚರ ಸಂಸ್ಥೆ- ಐಆರ್‌ಜಿಸಿ ಯ ಮುಖ್ಯಸ್ಥ ಸೇರಿದಂತೆ ನಾಲ್ವರು ಹಿರಿಯ ಇರಾನಿನ ಗುಪ್ತಚರ ಅಧಿಕಾರಿಗಳನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಇಂದು ಹೇಳಿಕೆ ನೀಡಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ <>*><>